

ನಿಂತು ಅದು ಯಾಕೊ ಏನೋ ನಲ್ಲಿಯೆಂಬೋದು ನೆಣವಾಗಿ ಸೇಡ್ರಿಕೊಂಡು ಕುಂತುಬಿಡತು. ಆ ನಲ್ಲಿಯೊಳಗೆ ನೀರು ಬರದೆ ನಿಂತು ಯಾವ ಕಡೆ ತಿರುಗಿಸಿದರೂ ನೀರಿಲ್ಲ, ಇದರ ಹಬ್ಬರ ಹಾಳಾಗ ಸಿದ್ದಮ್ಮನ ಮನೆಯ ನಲ್ಲಿಯನ್ನ ಎಂಗ್ ತಿರುಗಿಸಿದರು ನೀರಿಲ್ಲ, ಅವಳ ಮನೆಯ ಮುಂದಿನ ಇಂತ ನಲ್ಲಿಗೆ ಯಾವ ದೊಡ್ರೋಗ ಬಂದೈತೊ ಏನೊ? ಇಂಗೆ ನೀರಿಲ್ಲದ ಅಭಾವದಲ್ಲಿ ಸಾಯೋರಿಗೆ ಬಿಡಾನ ಅಂದ್ರು ತೊಟ್ಟು ನೀರೆಂಬೋದು ತೊಟ್ಟಿಕ್ಕಿಸುತಿಲ್ಲ. ಆ ಮನೆಯ ಮುಖ್ಯಸ್ಥೆ ಸಿದ್ದಮ್ಮಳಿಗಂತು ತಲೆ ನೆಲಕ್ಕಾಕೀರೆ ಸಾಕು ನಿದ್ದೆಯೆಂಬೋದು ನೆಟ್ಟಗೆ ಕಣ್ಣುಗಳಿಗೆ ಕಚ್ಚಿಕೊಂಬುತ್ತಿಲ್ಲ, ಮುನ್ನೂರು ಮೂವತ್ತು ಗಳಿಗೇಲು ಅವಳಿಗೆ ನಿಂತಕಂಡ್ರು ನೀರಿಂದೇ ಚಿಂತೆ. ಕುಂತುಕೊಂಡ್ರು ನೀರಿಂದೇ ಚಿಂತೆ. ಉಂಬೊ ಹಿಟ್ಟಲ್ಲ ಮಲಗೊ ನಿದ್ದೆಯಲ್ಲ ಅನ್ನಂಗಾಗೈತೆ. ಯವ್ವ ಏನಿಲ್ಲದಿದ್ರು ಮನೇಲಿ ಹೆಂಗಸರಿಗೆ ನೀರಿರಬೇಕು ಕಣಗಿ, ಎಂದು ಎಪ್ಪತ್ತಾರು ಜನಗಳ ಮುಂದೆ ವದರಿ ವದರಿ ಸೀಲು ಒತ್ತುತ್ತಿರುವ ಸಿದ್ದಮ್ಮನಿಗೆ ಸುಮ್ಮನಿರಲಾಗದಷ್ಟು ಸುಸ್ತಾಗೈತೆ.

ಕುಂತ್ರು ನಿಂತ್ರು ನೀರಿಲ್ಲವೆಂಬ ಚಿಂತೆ ತುಂಬಿರುವ ಸಂಸಾರವೆಂಬ ಆ ಮನೆಯೊಳಗೆ, ಹಿಂದು ಮುಂದಲೆನ್ನುವಂತ ಏಳೆಂಟು ಜನ ಸದಸ್ಯರಿರುವ ಕುಟುಂಬ ಅದರಲ್ಲೂ ಸಿದ್ದಮ್ಮನ ಕಿರೆ ಸೊಸೆ ಆ ಹುಡುಗಿ ಬೆಂಗಳೂರಿನ ಕಡೇ ಹುಡುಗಿ. ದೇವರ ಮ್ಯಾಲೆ ಹೂವ್ವಾ ತಪ್ಪೀರು ತಪ್ಪಿಸಬಹುದು, ಆ ಹುಡುಗಿಗೆ ದಿನಾ ಸ್ನಾನ ಮಾತ್ರ ತಪ್ಪಂಗಿಲ್ಲ. ಇಂತ ಪರುಸ್ಥಿತಿಯೊಳಗೆ ಅವಳು ಮಾತ್ರ ಆ ಮನೆಗೆ ಸೊಸೆಯಾಗಿ ಬಂದು ಇಷ್ಟೊರುಷವಾದರು ಅವಳ ಅಂಡು ನೋಯಿಸಿಕೊಂಡು ಯಾವತ್ತಿಗೂ ಒಂದು ಬಿಂದಿಗೆ ನೀರು ತಂದವಳೇ ಅಲ್ಲ. ಯವ್ವ ಯವ್ವ ಬಾಳ ಉನ್ನಾರಗಾತಿ ಹುಡುಗಿ ನೀರಿದ್ದರೆ ಮಾತ್ರ ಹಿಂದು ಮುಂದು ನೋಡ್ ದಂಗೆ ಸುಮ್ಮನೆ ಉಯ್ದು ಮಕನಾಗಿ ಉಯ್ಕಿತಾನೆ ಇರ್ತಾಳೆ, ನೀರಿಲ್ಲವೆಂದರೆ ಅವಳ ನಾಜೋಕು ಯಾರಿಗೂ ಬರಲ್ಲ. ಮುಸುರೆ ಗಿಸುರೆ, ಪಾತ್ರೆ ಪಡಗ ಬಟ್ಟೆ ಬರೆ, ಜೊತಿಗೆ ಕಟ್ಟಿಕೊಂಡಿರೋ ನಾಕು ಸೀಮೆ ಹಸುವಿಗೆ ಮೈತೊಳಿಯೋದು, ಬೂಸಾ ತಿನಿಸೋದು, ಸಾರಸೋದು, ಗುಡುಸೋದು ಮಕ್ಕಳ